## ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ | 2 |
| ಮೂರನೆಯ ಪದ್ಯ | 2 |
| ಅನುಪಮಿತಚಾರಿತ್ರ | 2 |
| ಕರುಣಾವನಧಿ | 5 |
| ಭಕ್ತಕುಟುಂಬಿ | 6 |
| ಯೋಗೀಜನಹೃದಯಪರಿಪೂರ್ಣ | 8 |
| ನಿತ್ಯಾನಂದ | 9 |
| ನಿಗಮನುತ | 10 |
| ವನಜನಾಭ | 11 |
| ಮುಕುಂದ | 12 |
| ಮುರಮರ್ದನ | 15 |
| ಜನಾರ್ದನ | 15 |
| ತ್ರೈಜಗತ್ಪಾವನ | 16 |
| ಸುರಾರ್ಚಿತ | 18 |

# ವಿಶ್ವನಂದಿನಿ ಲೇಖನಮಾಲೆ — 22

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ಮೂರನೆಯ ಪದ್ಯ

ಅನುಪಮಿತಚಾರಿತ್ರ ಕರುಣಾ-
ವನ ಭಕ್ತ ಕುಟುಂಬಿ ಯೋಗೀ-
ಜನಹೃದಯಪರಿಪೂರ್ಣ ನಿತ್ಯಾನಂದ ನಿಗಮನುತ |
ವನಜನಾಭ ಮುಕುಂದ ಮುರಮ-
ರ್ದನ ಜನಾರ್ದನ ತ್ರೈ ಜಗತ್ಪಾ-
ವನ ಸುರಾರ್ಚಿತ ದೇವ ರಕ್ಷಿಸು ನಮ್ಮನನವರತ ‖ ೩ ‖

## ಅನುಪಮಿತಚಾರಿತ್ರ

ಓ ಭಗವಂತ ನಿನಗೆ ನೀನೇ ಸಾಟಿ. ನಿನ್ನ ಚರಿತ್ರೆಗೂ ನೀನೇ ಸಾಟಿ. ನಿನ್ನ ಬದುಕಿನ ರೀತಿಗೆ ಮತ್ತೊಂದು ಉಪಮೆಯಿಲ್ಲ. ದೃಷ್ಟಾಂತ ನೀಡಲು ಅಸಾಧ್ಯವಾದ ರೀತಿಯಲ್ಲಿ ಲೀಲೆಗಳನ್ನು ತೋರಿದವನು ನೀನು.

ಉಪಮೆ ಎಂದರೆ ದೃಷ್ಟಾಂತ. ಉಪಮಿತ ಎಂದರೆ ದೃಷ್ಟಾಂತವಾದದ್ದು ಅಥವಾ ದೃಷ್ಟಾಂತವುಳ್ಳದ್ದು. ಅನುಪಮಿತ ಎಂದರೆ ದೃಷ್ಟಾಂತವಿಲ್ಲದ್ದು. ನಿನ್ನ ಚರಿತ್ರೆಯಂತೆ ಮತ್ತೊಬ್ಬರ ಚರಿತ್ರೆಯಿಲ್ಲ. ಮತ್ತೊಬ್ಬರು ಮನಸ್ಸಿನಿಂದಲೂ ಮಾಡಲಿಕ್ಕೆ ಸಾಧ್ಯವಿಲ್ಲದ ರೀತಿಯಲ್ಲಿ ಲೀಲೆಗಳನ್ನು ತೋರಿದವನು ನೀನು. ಪ್ರಜೆಗಳು ದುಡಿದ ಹಣವನ್ನೇ ತೆರಿಗೆಯನ್ನಾಗಿ ತೆಗೆದುಕೊಂಡು ಅದರಿಂದಲೇ ಅವರನ್ನು ರಕ್ಷಿಸುವ ರಾಜರೆಲ್ಲಿ, ಭೂಮಿಯಲ್ಲಿ ಎಲ್ಲಿ ಅಗೆದರೂ ರತ್ನಕನಕಗಳು ದೊರೆಯುವ ಹಾಗೆ ಮಾಡಿ, ಬರಿಯ ಪ್ರಜೆಗಳನ್ನಷ್ಟೇ ಅಲ್ಲದೇ ಅವರ ಆರೋಗ್ಯ ಆಯುಷ್ಯಗಳನ್ನೂ ನಿಯಮಿಸುತ್ತಾ, ಇಡಿಯ ಜೀವಿತಾವಯಲ್ಲಿ ಅವರಿಗೆ ರೋಗ ಮುಪ್ಪುಗಳು ಬಾರದ ಹಾಗೆ ಅವರನ್ನು ಕಾಪಾಡುತ್ತಾ, ನಿಯಮಿತವಾಗಿ ಸಾವಿರವರ್ಷಗಳಿಗೆ ಸ್ವೇಚ್ಛೆಯಿಂದ ಮರಣ ಪಡೆಯುವ ಹಾಗೆ ಮಾಡಿ, ಇಡಿಯ ರಾಜ್ಯಭಾರದ ಕಾಲದಲ್ಲಿ ಅಪಮೃತ್ಯು, ಅಕಾಲಮೃತ್ಯು, ಪೂರ್ವಮೃತ್ಯುವಿನಂತಹ

ದೊಡ್ಡಪ್ರಮಾಣದ ದುಃಖವಿರಲಿ ಸಣ್ಣ ದುರ್ವಾಸನೆಯ ದುಃಖವೂ ಪ್ರಜೆಗಳಿಗೆ ತಾಗದ ಹಾಗೆ ಅವರನ್ನು ರಕ್ಷಿಸಿದ ಇಡಿಯ ಭೂಮಿಯನ್ನು ಸತ್ಯಲೋಕಕ್ಕೆ ಸಮಾನವನ್ನಾಗಿ ಮಾಡಿದ ಶ್ರೀರಾಮಚಂದ್ರನಂತೆ ರಾಜ್ಯಭಾರ ಮಾಡಿದವರ್ಯಾರು ? ಮಾಡುವರ್ಯಾರು ?

ಶ್ರೀಮದಾಚಾರ್ಯರು ತಾತ್ಪರ್ಯನಿರ್ಣಯದಲ್ಲಿ ಹೇಳುತ್ತಾರೆ —

**"ಏವಂವಿಧಾನ್ಯಗಣಿತಾನಿ ಜನಾರ್ದನಸ್ಯ**
**ರಾಮಾವತಾರಚರಿತಾನಿ ತದನ್ಯಪುಂಭಿಃ |**
**ಶಕ್ಯಾನಿ ನೈವ ಮನಸಾಧಿಪಿ ಹಿ ತಾನಿ ಕರ್ತುಂ**
**ಬ್ರಹ್ಮೇಶಶೇಷಪುರುಹೂತಮುಖ್ಯೈಃ ಸುರೈಶ್ಚ"**

**"ಹುಟ್ಟಿಲ್ಲದಂಥ ಸಾವಿಲ್ಲದಂಥ ಈ ಭವದ**
**ಬಂಧವನು ನೀಗುವಂಥ**
**ಜನ್ನಾರ್ದನನು ತಾನು ರಾಮಾವತಾರದಲಿ**
**ತೋರಿಸಿದ ಲೀಲೆಗಳನು |**

**ಅನುಕರಿಸಿ ಮಾಡುವದು ಅವನಲ್ಲದ್ದೊರತು ಮತ್ತೊಬ್ಬ ಪುರುಷನೇನು ಆ ಎಲ್ಲ ಬ್ರಹ್ಮ ಶಿವ ಶೇಷ ಇಂದ್ರರಿಗೂ ಮನಸಿನಲೂ ಸಾಧ್ಯವಿಲ್ಲ ”**

ಆ ಚರಿತ್ರೆಗಳು ಅನುಪಮ, ಅನನುಕರಣೀಯವಷ್ಟೇ ಅಲ್ಲ ಭಕ್ತಿಯಿಂದ ಅವನ್ನು ತಿಳಿದು ನೆನೆಯುವವರಿಗೆ ಮುಕ್ತಿದಾಯಕವೂ ಹೌದು. **“ದೇವಾದಿಭಿಃ ಪರಿನುತಾನಿ ವಿಮುಕ್ತಿದಾನಿ”**

## ಕರುಣಾವನಧಿ

ಹೀಗೆ ಭಕ್ತರಿಗಾಗಿ ಭೂಮಿಯಲ್ಲಿ ಅವತರಿಸಿ ಬಂದು ಪರಮಾದ್ಭುತ ಚರಿತ್ರೆಗಳನ್ನು ತೋರಿಸಿ, ಅಷ್ಟೇ ಅಲ್ಲದೇ ಆ ಗ್ರಂಥಗಳನ್ನು ಮುಂದಿನ ಭಕ್ತ ಜನರಿಗಾಗಿ ವ್ಯಾಸ-ಹಯಗ್ರೀವರೂಪಗಳಿಂದ ಬರೆದಿಟ್ಟು, ಈ ಚರಿತ್ರೆಗಳನ್ನು ಭಕ್ತಿಯಿಂದ ಭಜನೆ ಮಾಡುವ ಜನರಿಗೆ ಮುಕ್ತಿಯನ್ನೇ ನೀಡುವ ಭಗವಂತನನ್ನು ದಾಸರು ಅತೀಪ್ರೇಮದಿಂದ

**“ಕರುಣಾವನಧಿ”** ಎಂದು ಕರೆಯುತ್ತಾರೆ. ಕರುಣಾವನ ಎಂದರೆ ಕರುಣಾಸಮುದ್ರ ಎಂದರ್ಥ. ವನ ಎಂಬ ಶಬ್ದಕ್ಕೆ ಸಂಸ್ಕೃತದಲ್ಲಿ ನೀರು ಎಂದರ್ಥವಿದೆ. **“ವನಂ ಪ್ರಸ್ರವಣೇ ಗೇಹೇ ಪ್ರವಾಸೇ ಅಂಭಸಿ ಕಾನನೇ”** ಎಂದು ಹೈಮಕೋಶ ಹೇಳುತ್ತದೆ. ವನ ಜಲ. ಜಲಜ ವನಜ.

## ಭಕ್ತಕುಟುಂಬಿ

ಭಗವಂತನ ಇದೇ ಕಾರುಣ್ಯದ ಮತ್ತೊಂದು ಮುಖ ಅವನು ಭಕ್ತಕುಟುಂಬಿ ಎನ್ನುವದು. ರೆಕ್ಕೆ ಬಲಿತ ಹಕ್ಕಿ ಹಡೆದವರನ್ನು ಬಿಟ್ಟು ಹಾರಿ ಹೋಗುತ್ತದೆ. ಮಕ್ಕಳು ಬೆಳೆದು ಬಲಿಯುತ್ತಿದ್ದ ಹಾಗೆಯೇ ತಮ್ಮ ಹಡೆದವರನ್ನೂ ಬಿಟ್ಟು ಬೇರೆ ಕುಟುಂಬವನ್ನು ಕಟ್ಟಿಕೊಳ್ಳುತ್ತಾರೆ. ಸಾಮಂತರಾಜನೊಬ್ಬ ಬಲಿಷ್ಠನಾಗುತ್ತಿದ್ದಂತೆ ಹಿರಿರಾಜನೊಡನೇ ಕಾದಾಡಲು ಸಿದ್ಧನಾಗುತ್ತಾನೆ. ಒಟ್ಟಾರೆ ಬಹಳ ಬಲವಿದ್ದ ವ್ಯಕ್ತಿ ಮತ್ತೊಬ್ಬರ ಅಧೀನನಾಗಿ ಬದುಕಲು, ಅವರೊಟ್ಟಿಗೆ ಬದುಕಲು ಸಿದ್ಧನಾಗುವದಿಲ್ಲ. ಹದ್ದು ಕೋಳಿಗಳ ಜತೆ ಸಖ್ಯ

ಬೆಳೆಸುವದಿಲ್ಲ. ಸಿಂಹ ಜಿಂಕೆಯನ್ನು ಮನೆಯಲ್ಲಿಟ್ಟುಕೊಳ್ಳುವದಿಲ್ಲ. ಆದರೆ ಭಗವಂತ ಸಕಲ ಚೇತನಪ್ರಪಂಚ ತಿಳಿಯಲಾರದಷ್ಟು ಹಿರಿಯನಾಗಿದ್ದರೂ ತನ್ನ ಮುಂದೆ ಅತೀ ಸಾಮಾನ್ಯರಾದ ಜನರನ್ನು ತನ್ನ ಕುಟುಂಬದಲ್ಲಿಟ್ಟುಕೊಂಡು ಸ್ವತಂತ್ರನಾದರೂ ಅವರಧೀನನಂತೆ ವರ್ತಿಸುತ್ತಾನೆ, ಅವರನ್ನು ಪೋಷಿಸುತ್ತಾನೆ. ಲಕ್ಷ್ಮಿಗೆ ಪತಿಯಾಗಿ ಬ್ರಹ್ಮ ವಾಯುಗಳಿಗೆ ತಂದೆಯಾಗಿ, ಸರಸ್ವತೀ ಭಾರತಿಯರಿಗೆ ಮಾವನಾಗಿ, ರುದ್ರಾದಿಗಳಿಗೆ ಪಿತಾಮಹನಾಗಿ ಉಳಿದವರಿಗೆ ಪ್ರಪಿತಾಮಹನಾಗಿ. ಇದು ಅವನ ಕುಟುಂಬವಾಯಿತು. ಇನ್ನು ನಿರಂತರವಾಗಿ ನಿರಂತರವಾಗಿ ನಿರ್ವ್ಯಾಜವಾಗಿ ಪರಿಶುದ್ಧವಾಗಿ ತನ್ನನ್ನು ಆರಾಸುವ ಜನರಿಗೆ ತಾನೇ ಸಮಗ್ರ ಕುಟುಂಬವಾಗಿ ಬಿಡುತ್ತಾನೆ. “**ತ್ವಮೇವ ಮಾತಾ ಚ ಪಿತಾ ತ್ವಮೇವ ತ್ವಮೇವ ಬಂಧುಶ್ಚ ಸಖಾ ತ್ವಮೇವ**” ಎಂದು ಹೇಳಿದಂತೆ ಭಗವಂತನೇ ತಂದೆ, ಭಗವಂತನೇ ತಾಯಿ, ಅವನೇ ಅಣ್ಣ,

ಅವನೇ ತಮ್ಮ, ಬಂಧು, ವಿತ್ತ, ಗುರು, ಒಡೆಯ ಸರ್ವಸ್ವವೂ ಅವನೇ. ಭಕ್ತಕುಟುಂಬಿ.

## ಯೋಗೀಜನಹೃದಯಪರಿಪೂರ್ಣ

ಯೋಗಿಜನಹೃದಯಪರಿಪೂರ್ಣ. ಛಂದಸ್ಸಿನ ಆನುಗುಣ್ಯಕ್ಕಾಗಿ ದಾಸರು ಯೋಗಿ ಎನ್ನುವದನ್ನು ಯೋಗೀ ಎಂದು ಬಳಸಿದ್ದಾರೆ. ಘೋರತಪಸ್ಸಿನ ಆಚರಣೆಯನ್ನು ಮಾಡುತ್ತ ಭಗವಂತನನ್ನು ಭಕ್ತಿಯಿಂದ ಒಲಿಸಿಕೊಂಡು ಶ್ರೇಷ್ಠ ಸಿದ್ಧಿಯನ್ನು ಪಡೆಯುವ ಜನರು ಯೋಗಿಜನರು.ಅವರ ಹೃದಯದಲ್ಲಿ ಅರ್ಥಾತ್ ಮನಸ್ಸಿನಲ್ಲಿ ಪರಿಪೂರ್ಣವಾಗಿ ಇದ್ದವನು ಯೋಗಿಜನಹೃದಯಪರಿಪೂರ್ಣ. ವಿಶಾಲವಾದ ಮನೆಯೊಳಗೆ ಮಲಗುವ ಮನೆ, ಅಡಿಗೆಯ ಮನೆ, ಊಟದ ಮನೆ, ವ್ಯವಹಾರದ ಮನೆ ಮುಂತಾದವುಗಳ ಜತೆಯಲ್ಲಿ ಪುಟ್ಟದಾಗಿ ದೇವರ ಮನೆ ಇರುವ ಹಾಗೆ ಸಾಮಾನ್ಯ ಮನುಷ್ಯನ ಮನಸ್ಸಿನಲ್ಲಿ ಹಣ, ಹೆಣ್ಣು, ಅಕಾರ ಮುಂತಾದ ನೂರು ಅಶೋಭನ ವಸ್ತುಗಳ ಜತೆಯಲ್ಲಿ

ಭಗವಂತನಿಗೊಂದು ಸ್ಥಾನವಿರುತ್ತದೆ. ಅನೇಕರಲ್ಲಿ ಅದೂ ದುರ್ಲಭ. ಆದರೆ ಯೋಗಿಜನರ ಹೃದಯದಲ್ಲಿ ಉಳಿದ ಯಾವುದಕ್ಕೂ ಸ್ಥಳವಿಲ್ಲ. ಅದು ಪೂರ್ಣವಾಗಿ ಶ್ರೀಹರಿಗೊಬ್ಬನಿಗೇ ಮೀಸಲು. ಅದಕ್ಕಾಗಿಯೇ ಅವರು ಯೋಗಿಜನರು. ಆದ್ದರಿಂದಲೇ ಭಗವಂತ ಯೋಗಿಜನಹೃದಯಪರಿಪೂರ್ಣ.

## ನಿತ್ಯಾನಂದ

ಅನಿತ್ಯ ಎಂದರೆ ಹುಟ್ಟುವಂಥದ್ದು, ವಿನಾಶವಾಗುವಂಥದ್ದು. ಎಲ್ಲ ಸಂಸಾರಿ ಜೀವರಿಗೆ ಒಂದು ನಿರ್ದಿಷ್ಟ ವಸ್ತುವಿನಿಂದ ಆನಂದ ಉಂಟಾಗುತ್ತದೆ, ಕೆಲವೇ ಗಳಿಗೆಗಳ ನಂತರ ವಿನಾಶವಾಗಿ ಬಿಡುತ್ತದೆ. ಆದರೆ, ಪರಮಾತ್ಮನ ಆನಂದ ಹುಟ್ಟುವಂಥದ್ದೂ ಅಲ್ಲ. ವಿನಾಶವಾಗುವಂಥದ್ದೂ ಅಲ್ಲ. ಅನಾದಿಕಾಲದಿಂದ ಅನಂತಕಾಲದವರೆಗೆ ಪರಿಪೂರ್ಣವಾದ ಆನಂದವನ್ನು ಅನುಭವಿಸುವ ನಿತ್ಯಾನಂದ ಶ್ರೀಹರಿ.

## ನಿಗಮನುತ

ನಿಗಮ ಎಂದರೆ ವೇದಗಳು. ವೇದಗಳಿಂದ ಸ್ತುತನಾದವನು, ವೇದಾಭಿಮಾನಿ ದೇವತೆಗಳಿಂದ ನಮಸ್ಕೃತನಾದವನು. ಅನಂತ ವೇದಗಳ ಪ್ರತ್ಯಕ್ಷರ, ಪ್ರತಿಪದ, ಪಾದ, ಅರ್ಧರ್ಚ, ಋಕ್, ಸೂಕ್ತ, ಅಧ್ಯಾಯ, ಮಂಡಲಗಳಿಂದ ಪರಿಪೂರ್ಣವಾಗಿ ಅನಂತರೂಪಗಳಿಂದ ಪ್ರತಿಪಾದ್ಯನಾದವನು ನಾರಾಯಣ. ಲಕ್ಷ್ಮೀ ಬ್ರಹ್ಮ ವಾಯು ರುದ್ರ ಇಂದ್ರಾದಿಗಳೂ ವೇದಪ್ರತಿಪಾದ್ಯರೇ. ಆದರೆ ಅನಂತವೇದಗಳಿಂದಲೂ ಅದರ ಪ್ರತ್ಯಕ್ಷರ ಪ್ರತಿಪದದಿಂದಲೂ ಸ್ವಾತಂತ್ರ್ಯೇಣ ಪ್ರತಿಪಾದ್ಯನಾದವನು ಶ್ರೀಮನ್ನಾರಾಯಣ ಮಾತ್ರ. **“ಸರ್ವೇ ವೇದಾ ಯತ್ಪದಮಾಮನಂತಿ”**

## ವನಜನಾಭ

ವನ ಎಂದರೆ ನೀರು ಎಂದು ಕರುಣಾವನ ಎಂಬ ಪದದ ಅರ್ಥವನ್ನು ತಿಳಿಯುವಾಗ ತಿಳಿದುಕೊಂಡೆವು. ವನಜ ಎಂದರೆ ಪದ್ಮ. ನಾಭಿಯಲ್ಲಿ ಪದ್ಮವನ್ನು ಪಡೆದವನು ವನಜನಾಭ. ಶ್ರೀಹರಿ ಆದಿಸೃಷ್ಟಿಯಲ್ಲಿ ಮಹತ್ ತತ್ವದಿಂದ ಭೂತತ್ವದವರೆಗಿನ ಎಲ್ಲ ತತ್ವಗಳನ್ನು ಸೃಜಿಸಿ ಬ್ರಹ್ಮಾಂಡವನ್ನು ಸೃಷ್ಟಿಸಲು ಆ ದೇವತೆಗಳಿಗೆ ತಿಳಿಸುತ್ತಾನೆ. ಆ ಎಲ್ಲ ಇಪ್ಪತ್ತನಾಲ್ಕು ತತ್ವಗಳಿಗೆ ಅಭಿಮಾನಿಗಳಾದ ದೇವತೆಗಳು ಒಟ್ಟುಗೂಡಿ ಬ್ರಹ್ಮಾಂಡವನ್ನು ಸೃಷ್ಟಿಸಲು ಪ್ರಯತ್ನಿಸಿದರೂ ಅದು ಸಾಧ್ಯವಾಗುವದಿಲ್ಲ. ಕಡೆಗೆ ಆ ಎಲ್ಲ ದೇವತೆಗಳು ಮತ್ತೆ ಶ್ರೀಹರಿಯನ್ನು ಪ್ರಾರ್ಥಿಸಿದಾಗ ಭಗವಂತ ಲಕ್ಷ್ಮೀ ವಿಷ್ಣುರೂಪದಿಂದ ಅವತರಿಸಿ ಬರುತ್ತಾನೆ. ಬಳಿಕ ಲಕ್ಷ್ಮೀದೇವಿ ಪರಮಾತ್ಮನ ಸಾಮರ್ಥ್ಯದಿಂದ ಬ್ರಹ್ಮಾಂಡವನ್ನು ೧೦೦೦ ವರ್ಷಗಳ ಕಾಲ ಗರ್ಭದಲ್ಲಿಟ್ಟು ಪೋಷಣೆ ಮಾಡಿ ಹಡೆಯುತ್ತಾಳೆ. ಇಲ್ಲಿಯವರೆಗೆ ಸೃಜಿಸಿದ ಸಮಸ್ತ

ದೇವತೆಗಳನ್ನು ಉದರದಲ್ಲಿಟ್ಟುಕೊಂಡ ಭಗವಂತ ಬ್ರಹ್ಮಾಂಡದೊಳಗೆ ಪ್ರವೇಶಿಸಿ ಅದರಲ್ಲಿನ ಗರ್ಭೋದಕದಲ್ಲಿ ಶೇಷಶಾಯಿಯಾಗಿ ಪವಡಿಸುತ್ತಾನೆ. ಮತ್ತೆ ಒಂದು ಸಾವಿರ ವರ್ಷ ಯೋಗನಿದ್ರೆಯಲ್ಲಿದ್ದ ಬಳಿಕ ನಾಭಿಯಿಂದ ಹದಿನಾಲ್ಕು ಲೋಕಗಳಿಗೆ ಬೇಕಾದ ಮೂಲವಸ್ತುಗಳನ್ನೊಳಗೊಂಡ ಹದಿನಾಲ್ಕು ದಳದ ಪದ್ಮವನ್ನು ಸೃಷ್ಟಿಸಿ ಅದರಲ್ಲಿ ಚತುರ್ಮುಖವುಳ್ಳ ಬ್ರಹ್ಮದೇವರನ್ನು ಸೃಷ್ಟಿಸುತ್ತಾನೆ. ಭಗವಂತನ ಆ ರೂಪವೇ ಪದ್ಮನಾಭರೂಪ.

## ಮುಕುಂದ

ಹೀಗೆ ಯಾರಿಂದ ಸೃಜಿಸಲಾಗದ ಬ್ರಹ್ಮಾಂಡವನ್ನು ಸೃಷ್ಟಿಸುವದಷ್ಟೇ ಅಲ್ಲ ಯಾರಿಗೂ ಸುತರಾಂ ನೀಡಲು ಸಾಧ್ಯವಾಗದ ಮೋಕ್ಷವನ್ನು ನೀಡುವ ಸಾಮರ್ಥ್ಯವೂ ಆ ಭಗವಂತನಿಗೆ ಮಾತ್ರ. ಮುಕುಂದ ಎಂದರೆ ಮೋಕ್ಷವನ್ನು ನೀಡುವವನು ಎಂದರ್ಥ.

ಮೋಕ್ಷ ನಾಲ್ಕು ವಿಧವಾದದ್ದು. ಮೊದಲನೆಯದು ‘ಕರ್ಮಕ್ಷಯ’ ಎಂಬ ಮೋಕ್ಷ. ಅಪರೋಕ್ಷಜ್ಞಾನವಾಗುತ್ತಲೇ ಉಂಟಾಗುವ ಅನಂತಸಂಚಿತಕರ್ಮಗಳ ವಿನಾಶ. ಭಗವಂತ ಜೀವನಿಗೆ ಹೃದಯದಲ್ಲಿ ತನ್ನ ಸಾಕ್ಷಾತ್ಕಾರವನ್ನು ನೀಡುತ್ತಿದ್ದಂತಯೇ ಆ ಜೀವ ಅನಾದಿಕಾಲದಿಂದ ಮಾಡಿಕೊಂಡು ಬಂದ ಸಕಲ ಸಂಚಿತಕರ್ಮಗಳಿಂದ ಮುಕ್ತಿ ನೀಡುತ್ತಾನೆ.

ಬಳಿಕ ಮೋಕ್ಷದಲ್ಲಿ ವಿಶೇಷತೆಯನ್ನು ಪಡೆಯುವದಕ್ಕಾಗಿ ಮಾಡಬೇಕಾಗಿರುವ ಸಾಧನೆಗೋಸುಗ ಕಿಂಚಿತ್ ಪ್ರಾರಬ್ಧಕರ್ಮಗಳನ್ನು ಉಳಿಸಿ ಅವೆಲ್ಲವೂ ಮುಗಿದ ತಕ್ಷಣ ಜೀವನನ್ನು ಬ್ರಹ್ಮರಂಧ್ರದ ಮೂಲಕ ಉತ್ಕ್ರಾಂತಿಯನ್ನು ನೀಡಿ ಈ ಭೂಲೋಕದಿಂದ, ಪಾಂಚಭೌತಿಕ ದೇಹದಿಂದ ಭಗವಂತ ಮುಕ್ತಿಯನ್ನು ನೀಡುತ್ತಾನೆ. ಇದು ಎರಡನೆಯ ‘ಉತ್ಕ್ರಾಂತಿ’ ಎಂಬ ಹೆಸರಿನ ಮೋಕ್ಷ.

ಹೀಗೆ ಒಂದೊಂದೇ ಅನಿಷ್ಟಪದಾರ್ಥದಿಂದ ಮುಕ್ತಿಯನ್ನು ನೀಡುತ್ತ ಅವನನ್ನ ಚಂದ್ರಲೋಕ

ಸೂರ್ಯಲೋಕಗಳಿಗೆ ಕರೆದುಕೊಂಡು ಹೋಗಿ ಉತ್ತಮೋತ್ತಮವಾದ ಆನಂದದ ಆವಿರ್ಭಾವವನ್ನು ಮಾಡಿಸುತ್ತಾನೆ. ಇದು ಮೂರನೆಯ ಮೋಕ್ಷ. 'ಮಾರ್ಗ'

ನಾಲ್ಕನೆಯದು ಮಹಾಮೋಕ್ಷ. ಬ್ರಹ್ಮಾಂಡದ ಪ್ರಳಯವಾದ ಬಳಿಕ ವಿರಜಾನದೀಸ್ನಾನವನ್ನು ಬ್ರಹ್ಮದೇವರ ಸಂಗಡ ಜೀವನಿಗೆ ಮಾಡಿಸಿ ಈ ಮೂಲಕ ಲಿಂಗದೇಹದ ಭಂಗವಾಗುವಂತೆ ಮಾಡಿ ಬಳಿಕ ಮುಂದಿನ ಸೃಷ್ಟಿಕಾಲದಲ್ಲಿ ಅವರನ್ನು ಶ್ವೇತದ್ವೀಪಕ್ಕೆ ಕರೆದುಕೊಂಡು ಬಂದು ಅಲ್ಲಿ ಅವರ ಪ್ರಕೃತಿಬಂಧ ಮತ್ತು ಇಚ್ಛಾಬಂಧವೆಂಬ ಮಹಾಪ್ರಬಲವಾದ ಎರಡು ಬಂಧನಗಳನ್ನು ಪರಿಹರಿಸಿ ಅನಂತಾನಂದಾವಿರ್ಭಾವರೂಪವಾದ ಮಹಾಮೋಕ್ಷವನ್ನು ಕರುಣಿಸುತ್ತಾನೆ. ಹೀಗೆ ನಾಲ್ಕು ತೆರನಾಗಿರುವ ಈ ಮೋಕ್ಷವನ್ನು ನೀಡಲು ಬ್ರಹ್ಮಾದಿ ಯಾವ ದೇವತೆಗಳಿಗೂ ಸಾಧ್ಯವಿಲ್ಲ. ಆದ್ದರಿಂದ ಪರಮಾತ್ಮನನ್ನು ಮುಕುಂದ ಎಂದು ಕರೆಯುತ್ತಾರೆ.

## ಮುರಮರ್ದನ

ಮುರ ಎಂಬ ರಾಕ್ಷಸನನ್ನು ಕೊಂದವನು. ನರಕಾಸುರನ ಕಿಂಕರನಾದ ಆ ಮುರ ಎನ್ನುವ ಅಸುರನನ್ನು ಶ್ರೀಹರಿ ಸತ್ಯಭಾಮೆಯೊಡಗೂಡಿ ಪ್ರಾಗ್ಜ್ಯೋತಿಷಪುರದ ಮೇಲೆ ಆಕ್ರಮಣ ಮಾಡಿದಾಗ ಸಂಹಾರ ಮಾಡುತ್ತಾನೆ.

## ಜನಾರ್ದನ

ಒಂದು ಅಪೂರ್ವವಾದ ಯೌಗಿಕಶಬ್ದ. ಶ್ರೀಮದಾಚಾರ್ಯರು ಗೀತಾಭಾಷ್ಯದ ಹತ್ತನೆಯ ಅಧ್ಯಾಯದ ಹದಿನೆಂಟನೆಯ ಶ್ಲೋಕವನ್ನು ವ್ಯಾಖ್ಯಾನಿಸುವಾಗ ವೇದದ ಪ್ರಮಾಣವನ್ನೊದಗಿಸಿ ಜನಾರ್ದನ ಎಂಬ ಶಬ್ದದ ಅರ್ಥವನ್ನು ತಿಳಿಸುತ್ತಾರೆ "ನ ಜಾಯತೇ ಅರ್ದಯತಿ ಚ ಸಂಸಾರಮಿತಿ ಜನಾರ್ದನಃ" ಎಂದು. ಜ ಎಂದರೆ ಹುಟ್ಟುವವನು. ನಜ ಎಂದರೆ ಎಂದಿಗೂ ಹುಟ್ಟಿರದವನು. ಅದೇ ಕಾರಣಕ್ಕೆ ಮರಣವಿಲ್ಲದವನೂ ಸಹಿತ. ನಜ ಎಂಬ ಶಬ್ದವೇ

ಜನ ಎಂದಾಗುತ್ತದೆ. ಅರ್ದನ ಎಂದರೆ ಭೀಕರ ಸಂಸಾರವನ್ನು ವಿನಾಶ ಮಾಡುವವನು. ಹೀಗೆ ಸ್ವಯಂ ಜನನ ಮರಣಗಳಿಲ್ಲದ, ಮತ್ತೊಬ್ಬರ ಜನನಮರಣಚಕ್ರಕ್ಕೆ ಕಾರಣವಾದ ಸಂಸಾರವನ್ನು ನಾಶಮಾಡಿ ಅವರಿಗೆ ಮುಕ್ತಿಯನ್ನು ನೀಡುವ ಪ್ರಭುವಿಗೆ ಜನಾರ್ದನ ಎಂದು ಹೆಸರು.

## ತ್ರೈಜಗತ್ಪಾವನ

ಮೂರುಲೋಕಗಳಲ್ಲಿಯೂ ಪವಿತ್ರನಾದವನು ಅಥವಾ ಮೂರುಲೋಕದಲ್ಲಿರುವ ಸಕಲರಿಗೂ ಪಾವಿತ್ರ್ಯವನ್ನು ನೀಡುವನು.
ಮನುಷ್ಯನಿರುವ ಭೂಮಿ, ಗ್ರಹಮಂಡಳಗಳಿರುವ ಅಂತರಿಕ್ಷ, ದೇವತೆಗಳಿರುವ ಸ್ವರ್ಗ ಈ ಮೂರನ್ನು ತ್ರಿಲೋಕಗಳು ಎಂದು ಕರೆಯುತ್ತಾರೆ.
ಜೀವಪ್ರಪಂಚದ ಸರ್ವೋತ್ತಮಚೇತನರಾದ ಬ್ರಹ್ಮದೇವರಿಂದಾರಂಭಿಸಿ,
ಸರ್ವಾಧಮಚೇತನನಾದ ಕಲಿಯವರೆಗಿನ ಸಕಲಜೀವರೂ ಒಂದಲ್ಲ ಒಂದು ಬಾರಿ ಈ ಮೂರುಲೋಕಗಳ ಸಂಪರ್ಕಕ್ಕೆ ಬಂದೇ ಬರುತ್ತಾರೆ.

ಅದಕ್ಕಾಗಿ ಭಗವಂತ ಹದಿನಾಲ್ಕು ಲೋಕಗಳಿಗೆ ಪಾವನನಾದರೂ, ತ್ರೈಜಗತ್ಪಾವನ ಎಂದು ಕರೆಯುತ್ತಾರೆ. ಕಾರಣ, ಸಕಲಚೇತನರೂ ಈ ಮೂರ್ಲೋಕಗಳಿಗೆ ಸಂಬಂಧಪಟ್ಟವರೇ. ಆದ್ದರಿಂದ ಅವರೆಲ್ಲರ ಮಧ್ಯದಲ್ಲಿ ಶ್ರೀಹರಿಯನ್ನು ಪವಿತ್ರ ಎಂದು ಕರೆದರೆ ಅನಂತಜೀವರಾಶಿಗಳಿಲ್ಲಿಯೂ ಪವಿತ್ರ ಎಂದು ಕರೆದಂತೆಯೇ.

## ಸುರಾರ್ಚಿತ

ದೇವತೆಗಳಿಂದ ಅರ್ಚಿತನಾದವನು. ದೇವತೆಗಳು ಎಂದರೆ ಮನುಷ್ಯರಿಗೆ ತಿಳಿಯಲು ಅಸಾಧ್ಯವಾದ ಮಹಾಮಹಾತ್ಮ್ಯವುಳ್ಳವರು. ಭಗವಂತ ಅವರಿಂದಲೂ ಅರ್ಚಿತನಾದವನು. ಸಮಸ್ತ ಋಷಿ ಮುನಿಗಳಿಂದ ಪೂಜಿತರಾಗುವ ಇಂದ್ರ ಶಚಿಯರು ಸ್ವರ್ಗಲೋಕದಲ್ಲಿ ಉಪೇಂದ್ರರೂಪದ ಭಗವಂತನನ್ನು ಅರ್ಚಿಸುತ್ತಾರೆ. ಸಕಲಪಿತೃಗಳಿಂದ ಪೂಜ್ಯರಾದ ಶ್ಯಾಮಲಾ ಯಮಧರ್ಮರು ದಕ್ಷಿಣದ ಯಮಲೋಕದಲ್ಲಿ ರಾಮ ಪರಶುರಾಮರೂಪಗಳನ್ನು ಆರಾಸುತ್ತಾರೆ. ನಾಗಜಾತಿಯ ಸಮಸ್ತಜೀವರಿಂದ ಆರಾಧ್ಯರಾದ ಗಂಗಾ ವರುಣರು ತಮ್ಮ ವರುಣಲೋಕದಲ್ಲಿ ಮತ್ಸ್ಯನಾಮಕನಾದ ನಾರಾಯಣನನ್ನು ಪೂಜಿಸುತ್ತಾರೆ. ಯಕ್ಷಗಂಧರ್ವರ ಅಪತಿಯರಾದ ಋದ್ಧಿ ಕುಬೇರರು ಕಲ್ಕಿರೂಪದ ಭಗವಂತನನ್ನು ತಮ್ಮ ಅಲಕಾಪುರದಲ್ಲಿ ಅರ್ಚಿಸುತ್ತಾರೆ. ಸಮಸ್ತ ಭೂತಗಣಗಳಿಂದ ಸೇವಿತರಾಗುವ ಶಿವ

ಪಾರ್ವತಿಯರು ಭಗವಂತನ ಲಕ್ಷ್ಮೀನೃಸಿಂಹರೂಪವನ್ನು ಕೈಲಾಸದಲ್ಲಿ ಸೇವಿಸುತ್ತಾರೆ. ಈ ಎಲ್ಲ ದೇವತಾ ಋಷಿ ಗಂಧರ್ವ ಚಕ್ರವರ್ತಿಗಳಿಂದ ಆರಾಧಿತರಾಗುವ ಸರಸ್ವತೀ ಬ್ರಹ್ಮದೇವರು ಬ್ರಹ್ಮಾಂಡದೊಳಗಣ ನಿಖಿಲರೂಪಗಳನ್ನೂ ತಮ್ಮ ಬ್ರಹ್ಮಲೋಕದ ಪರಮಾದ್ಭುತ ಸಭೆಯಲ್ಲಿ ಪ್ರತೀಕ್ಷಣವೂ ಪೂಜಿಸುತ್ತಾರೆ. ಹೀಗೆ ಸುರಾರ್ಚಿತ ಎನ್ನುವ ಒಂದೇ ಶಬ್ದದಿಂದ ಭಗವಂತ ಜಗತ್ತಿನ ಸಮಸ್ತಸಜ್ಜೀವರಿಂದಲೂ ಅರ್ಚಿತ ಎಂಬ ಪ್ರಮೇಯ ಸಿದ್ಧವಾಗುತ್ತದೆ. ಶ್ರೀಮದಾಚಾರ್ಯರು ಈ ತತ್ವವನ್ನು ಮಹಾಭಾರತತಾತ್ಪರ್ಯ-ನಿರ್ಣಯದ ಇಪ್ಪತ್ತೊಂದನೆಯ ಅಧ್ಯಾಯದಲ್ಲಿ ತಿಳಿಸುತ್ತಾರೆ ॥ ೩ ॥

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491